ವಿಜಯ ಕರ್ನಾಟಕ

18 April 2025

# ನವೆಂಬರ್‌ನಲ್ಲಿ ರಾಷ್ಟ್ರೀಯ ಸಮುದ್ರ ಮೀನುಗಾರಿಕಾ ಸಮೀಕ್ಷೆ

■ ವಿಕ ಸುದ್ದಿಲೋಕ ಮಂಗಳೂರು

ಕರಾವಳಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 5ನೇ ರಾಷ್ಟ್ರೀಯ ಮೀನುಗಾರಿಕಾ ಸಮೀಕ್ಷೆ (ನ್ಯಾಷನಲ್ ಮರೈನ್ ಫಿಶರೀಸ್ ಸೆನ್ಸಸ್- 2025- ಎಂಎಫ್‌ಸಿ- 2025) ನವೆಂಬರ್ ತಿಂಗಳಲ್ಲಿ ಪ್ರಾರಂಭವಾಗಲಿದ್ದು, ಮೀನುಗಾರರ ಮನೆಗಳ ಗಣತಿ ಕಾರ್ಯಕ್ರಮ ನಡೆಯಲಿದೆ.

ಈ ಸಮೀಕ್ಷೆ ರಾಷ್ಟ್ರಾದ್ಯಂತ ಮೀನುಗಾರರ ಸಾಮಾಜಿಕ- ಆರ್ಥಿಕ ಸ್ಥಿತಿಗತಿಯನ್ನು ದಾಖಲಾತಿ ಮಾಡುವುದಲ್ಲದೆ, ರಾಷ್ಟ್ರೀಯ ಮೀನುಗಾರಿಕೆಗೆ ಬೆನ್ನೆಲುಬಾಗಿ ನಿಂತಿರುವ ಮೂಲಸೌಕರ್ಯಗಳ ನಕ್ಷೆಯನ್ನು ಚಿತ್ರಿಸಲು ಉದ್ದೇಶಿಸುತ್ತದೆ.

ಗಣತಿ ಎಣಿಕೆದಾರರನ್ನು ಸ್ಥಳೀಯ ಮೀನುಗಾರಿಕಾ ಸಮುದಾಯಗಳಿಂದ ಆಯ್ಕೆ ಮಾಡಲು ನಿಯೋಜಿಸಿದ್ದು, ನವೆಂಬರ್- ಡಿಸೆಂಬರ್ ತಿಂಗಳಲ್ಲಿ 45 ದಿನಗಳ ಸಮೀಕ್ಷೆ ಹಮ್ಮಿಕೊಳ್ಳಲಾಗಿದೆ. ಇದರ ಸಲುವಾಗಿ ಪ್ರತಿ ಮೀನುಗಾರರ ಮನೆಗೆ ಆಗಮಿಸಲಿದ್ದಾರೆ.

ಕೇಂದ್ರೀಯ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆ ಈ ಸಮೀಕ್ಷೆಯನ್ನು ಪ್ರಧಾನ ಮಂತ್ರಿ ಮತ್ಸ್ಯ ಸಂಪದಾ ಯೋಜನೆಯಡಿ ಪ್ರಾಯೋಜಿಸಿದ್ದಾರೆ. ಭಾರತೀಯ ಕೃಷಿ ಅನುಸಂಧಾನ ಪರಿಷತ್- ಕೇಂದ್ರೀಯ ಸಮುದ್ರ ಮೀನುಗಾರಿಕೆ ಸಂಸ್ಥೆ (ಐಸಿಎಆರ್- ಸಿಎಂಎಫ್‌ಆರ್‌ಐ) ಒಂಬತ್ತು ಕರಾವಳಿ ರಾಜ್ಯಗಳಲ್ಲಿನ ಸಮೀಕ್ಷೆಯ ಉಸ್ತುವಾರಿ ವಹಿಸಿದ್ದು,

> **ಸಮೀಕ್ಷೆಯು ಮೀನುಗಾರಿಕೆ ಸಮುದಾಯಗಳ ಜನಸಂಖ್ಯೆ, ಅವರ ಜೀವನೋಪಾಯಗಳನ್ನು ದಾಖಲಿಸುವುದಲ್ಲದೆ, ಮೀನುಗಾರಿಕಾ ಮೂಲಸೌಕರ್ಯಗಳಾದ - ವಿವಿಧ ಮೀನುಗಾರಿಕಾ ದೋಣಿಗಳು, ಮೀನುಗಾರಿಕೆಯಲ್ಲಿ ಉಪಯೋಗಿಸುವ ಸಾಧನಗಳು- ಬಲೆಗಳ ವಿಧಗಳು, ಬಂದರುಗಳು, ಮೀನು ಸಂಸ್ಕರಣಾ ಘಟಕಗಳು ಮತ್ತು ಶೀತಲ ಶೇಖರಣಾ ಘಟಕಗಳ ಎಣಿಕೆ ಮಾಡಲಾಗುತ್ತದೆ.**

ಕೇಂದ್ರಾಡಳಿತ ಪ್ರದೇಶಗಳಲ್ಲಿ ಭಾರತೀಯ ಮೀನುಗಾರಿಕೆ ಸಮೀಕ್ಷಾ ಸಂಸ್ಥೆ ( ಫಿಶರೀಸ್ ಸರ್ವೇ ಆಫ್ ಇಂಡಿಯಾ - ಎಫ್‌ಎಸ್‌ಐ) ನೋಡಲ್ ಏಜೆನ್ಸಿಯಾಗಿ ನೇಮಕವಾಗಿದೆ.

ಈ ದಾಖಲಾತಿ ಕಾರ್ಯ ನಡೆಸುವ ಸಲುವಾಗಿ ತಯಾರಿಕಾ ಹಂತಗಳನ್ನು ಅನುಸರಿಸಲಾಗುತ್ತಿದ್ದು, ಉನ್ನತಮಟ್ಟದ ಸಮಾವೇಶವು ಕೇಂದ್ರ ಸರಕಾರದ ಮೀನುಗಾರಿಕೆ ಇಲಾಖೆ ಜಂಟಿ ಕಾರ್ಯದರ್ಶಿ ನೀತು ಕುಮಾರಿ ಪ್ರಸಾದ್ ಸಮ್ಮುಖದಲ್ಲಿ ನಡೆಯಿತು. ಸಮೀಕ್ಷಾ ಕಾರ್ಯಕ್ರಮಕ್ಕೆ ಬೇಕಾದ ಎಲ್ಲ ಪ್ರಥಮ ಹಂತದ ಕ್ರಮಗಳು ಹಾಗೂ ನಿರೀಕ್ಷಿತ ಹಂತಗಳ ಬಗ್ಗೆ ಚರ್ಚೆ ನಡೆಯಿತು.

ಚರ್ಚೆಯಲ್ಲಿ ಮೀನುಗಾರಿಕಾ ಮಂಡಳಿಯ ಹಿರಿಯ ಅಧಿಕಾರಿಗಳು, ರಾಜ್ಯ - ಕೇಂದ್ರಾಡಳಿತ ಪ್ರದೇಶ ಗಳ ಮೀನುಗಾರಿಕೆ ಇಲಾಖೆಯ ಪ್ರತಿನಿಧಿಗಳು, ಮೀನುಗಾರಿಕಾ ಸಮೀಕ್ಷಾ ಸಂಸ್ಥೆ ಹಾಗೂ ಕೇಂದ್ರೀಯ ಸಮುದ್ರ ಮೀನುಗಾರಿಕೆ ಸಂಶೋಧನಾ ಸಂಸ್ಥೆಯ ಮುಖ್ಯಸ್ಥರು ಪಾಲ್ಗೊಂಡಿದ್ದರು. ರಾಜ್ಯ ಮೀನುಗಾರಿಕೆ ಇಲಾಖೆ ಸಂಪೂರ್ಣ ಬೆಂಬಲ ಒದಗಿಸಿದ್ದು, ನಿರ್ದಿಷ್ಟ ಸ್ಥಳಗಳು, ಮೀನುಗಾರಿಕೆ ಹಳ್ಳಿಗಳು, ಎಣಿಕೆದಾರರು ಮತ್ತಿತರ ಸಂಪನ್ಮೂಲಗಳನ್ನು ನೀಡುವುದಾಗಿ ತಿಳಿಸಿದೆ.

''ಈ ಸಮೀಕ್ಷೆಯು ದೇಶದ ಮೀನುಗಾರಿಕಾ ನಿರ್ವಹಣೆಯಲ್ಲಿ ಮುಖ್ಯವಾಗಿರುವ ನೀತಿಸಂಹಿತೆಗಳನ್ನು ರಚಿಸುವುದರಲ್ಲಿ ಅಗಾಧ ಪಾತ್ರ ವಹಿಸುವುದಲ್ಲದೆ, ಮೀನುಗಾರಿಕೆಯ ಕಲ್ಯಾಣ ಮತ್ತು ಮೂಲ ಸೌಕರ್ಯಗಳ ಬಲಿಷ್ಟತೆ ಜತೆಗೆ ಲಕ್ಷಾಂತರ ಮೀನುಗಾರರ ಜೀವನೋಪಾಯಗಳ ಏಳಿಗೆಯಲ್ಲಿ ಸಹಾಯವಾಗಲಿದೆ'' ಎಂದು ಕೇಂದ್ರೀಯ ಸಮುದ್ರ ಮೀನುಗಾರಿಕೆ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಗ್ರಿನ್ಸನ್ ಜಾರ್ಜ್ ತಿಳಿಸಿದ್ದಾರೆ.

ನಿರ್ಮಿತ ಮಾಹಿತಿ ಎಣಿಕೆಯ ಮಾದರಿಗಳ ಕುರಿತಾಗಿ ಸ್ಥಳೀಯ ಸಮುದಾಯಗಳ ಎಣಿಕೆದಾರರಿಗೆ ತರಬೇತಿ ನೀಡಲು ರಾಜ್ಯ ಮತ್ತು ಜಿಲ್ಲಾ ಉಸ್ತುವಾರಿಗಳಿಗೆ ಸಂಕ್ಷಿಪ್ತವಾಗಿ ವಿವರಿಸಲಾಯಿತು.

ಕೇಂದ್ರ ಮೀನುಗಾರಿಕಾ ಸಚಿವಾಲಯದ ಅಧಿಕಾರಿಗಳಾದ ಮೀನುಗಾರಿಕಾ ಅಭಿವೃದ್ಧಿ ಪ್ರಾಧಿಕಾರದ ಡಾ.ಮುಹಮ್ಮದ್ ಕೋಯ, ಡೆಪ್ಯುಟಿ ಕಮೀಷನರ್ ಡಾ.ಸಂಜಯ್ ಪಾಂಡೆ, ಜಂಟಿ ನಿರ್ದೇಶಕ ಮನೀಶ್ ಬಿಂದಲ್ ಸಲಹೆಗಳನು ನೀಡಿದರು.